ಅಬ್ಬರದೊಂದಿಗೆ ಮಂಗಳಾರತಿ ಮಾಡಿದರೆ ಸಂಕ್ರಮಣ ವಿಧಿವಿಧಾನ ಆರಂಭಗೊಂಡಿತೆಂದೇ ಲೆಕ್ಕ. ಅಷ್ಟು ಹೊತ್ತಿಗೆ ಸ್ನಾನ ಮಾಡಿ, ನೀರಿಳಿಯುವ ಜಡೆ ಬಿಚ್ಚಿ ಹರಡಿ ಕೆಂಪುಮಡಿಯುಟ್ಟು, ಕಾಲಿಗೆ ಹಾವುಗೆ, ಗಗ್ಗರ, ಸೊಂಟಕ್ಕೆ ಬೆಳ್ಳಿ ನೆವಳ, ಕುತ್ತಿಗೆಗೆ ತುಳಸಿ, ರುದ್ರಾಕ್ಷಿ ಮಾಲೆ, ಎಡಬಗಲಲ್ಲಿ ಬೆಳ್ಳಿಕಟ್ಟಿನ ನಾಗರಬೆತ್ತ, ಬಲಗೈಯಲ್ಲಿ ಅರಸಿನ, ಕುಂಕುಮ, ನೀರು ಚೆಲ್ಲಿದ ಸಿಂಗಾರ ಕೈಯಲ್ಲಿ ಹಿಡಿದುಕೊಂಡ ಸನ್ನದ್ಧನಾಗಿ ನಿಂತ ಗಣಪಾತ್ರಿ ನಾಗನ ಮುಖಕ್ಕೆ, ಭಟ್ಟರು ತೀರ್ಥ ಎರಚಿ, ಕೈಯಲ್ಲಿ ಬಿಚ್ಚಿದ ಸಿಂಗಾರಕ್ಕೆ, ಕುಂಕುಮ, ಪ್ರಸಾದ ಎರಚುವ ಸಮಯಕ್ಕೆ ಸರಿಯಾಗಿ ತಮ್ಮನ ಮೌರ್ವಿ (ವಾದ್ಯ) ಸ್ವರ. ಸಮ್ಮೇಳದ ಅಬ್ಬರ ತಾರಕ್ಕೇರಿ ಗಣಮಗನಿಗೆ ಪಂಜುರ್ಲಿ ಆಳಿಕೆಯಾಗಿ ಕಾಕು ಹಾಕುತ್ತಾ, ನಾಗ ನರ್ತನ ಮಾಡುತ್ತಾ, ಹಿಂದೆಮುಂದೆ ಹೆಜ್ಜೆ ಹಾಕಲು ಪ್ರಾರಂಭಿಸಿದರೆ ವಾದ್ಯ ಪರಿವಾರವೂ ಅದಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಗಣಮಗ ಮೈಮುರಿಯುತ್ತಾ ಕುಣಿದು ಕುಪ್ಪಳಿಸಿ ಕಾಕು ಹೊಡೆದು:

''ಏನೋ ಯಜಮಾನ ಕಾಲಕಾಲಕ್ಕೆ ಮಳೆ, ಬೆಳೆಯಾಗಿ ದೇಶ ಸುಭಿಕ್ಷೆಯಾಗಿರುವಂತೆ ಕರುಣಿಸಿದ್ದೇನಲ್ಲವೇ? ಆದರೂ ಕರೆಸಿದ ಕಾರಣವೇನು? ನನ್ನನ್ನು ನಂಬಿದ ಭಕ್ತರು, ಜಾನುವಾರು ಸಕಲವೂ ಸೌಖ್ಯವೇ?''

''ತಾಯಿ ನಿನ್ನ ಕೃಪಾಕಟಾಕ್ಷದಿಂದ ಎಲ್ಲಾ ಸೌಖ್ಯ. ಮಳೆಬೆಳೆಯೂ ಸಮೃದ್ಧಿ. ಜಾನುವಾರೂ ಸುರಕ್ಷಿತ. ಆದರೂ ಮನುಷ್ಯರೆಂದ ಮೇಲೆ ಸಣ್ಣಪುಟ್ಟ ತೊಂದರೆತಾಪತ್ರಯ, ಕಷ್ಟನಷ್ಟ, ಕಾಯಿಲೆಕಸಾಲೆ ಬೆನ್ನುಬಿದ್ದು ಕಾಡುತ್ತಿರುತ್ತವಲ್ಲವೆ? ಆ ಎಲ್ಲಾ ಸಂಕಷ್ಟ ಪರಿಹರಿಸಿ ಕಾಪಾಡುವ ಶಕ್ತಿ ನಿನಗೊಬ್ಬಳಿಗೇ ಇರುವುದಲ್ಲವೇ? ಅದನ್ನೆಲ್ಲಾ ಬಿನ್ನವಿಸಿಕೊಳ್ಳಲೆಂದೇ ನಿನ್ನ ಸಾನಿಧ್ಯಕ್ಕೆ ಶರಣು ಬಂದಿದ್ದಾರೆ. ಮೊರೆ ಆಲಿಸಿ ಭಕ್ತರನ್ನು ಕಾಪಾಡು ತಾಯಿ...''

ಹೀಗೆ ಹೇಳಿಕೆಕೇಳಿಕೆ ಪ್ರಾರಂಭ. ಈ ಹೇಳಿಕೆಕೇಳಿಕೆಯಲ್ಲೂ ವೈಶಿಷ್ಟ್ಯವುಂಟು. ಭಕ್ತರು ನೇರವಾಗಿ ಗಣಮಗನ (ಪಂಜುರ್ಲಿ) ಹತ್ತಿರ ಅರಿಕೆ ಮಾಡಿಕೊಳ್ಳುವ ಹಾಗಿಲ್ಲ. ಏನೇ ಇದ್ದರೂ ಅದು ಅರ್ಚಕನ ಮೂಲಕ ಬಿನ್ನವಿಸಿಕೊಳ್ಳಬೇಕು. ಬಿನ್ನಹ ಆಲಿಸಿ ಪಂಜುರ್ಲಿ ಸೂಚಿಸುವ ಪರಿಹಾರವನ್ನು ಮತ್ತೆ ಅರ್ಚಕ, ಭಕ್ತರಿಗೆ ಹೇಳಬೇಕು. ಇದು ಚಾಚು ತಪ್ಪದೇ ನಡೆದು ಕೊಂಡು ಬರುವ ಕಟ್ಟುಕಟ್ಟಲೆ!

ಸಮಸ್ಯೆಗೆ ಸೂಕ್ತ ಪರಿಹಾರ ಪಂಜುರ್ಲಿ ಹೇಳಿ – ಕಾಯಿ ಮಂತ್ರಿಸಿ ಕೊಡುವುದು, ತಂತ್ರ ಬರೆದು ಕೊಡುವುದು, ತೀರ್ಥ ಎರಚಿ, ಬೆಳ್ಳಿ ಕಟ್ಟಿನ ನಾಗರಬೆತ್ತದಲ್ಲಿ ಹೊಡೆದು ದೆವ್ವ–ರಣ ಬಿಡಿಸುವುದು, ಬೂದಿ, ಪ್ರಸಾದ ನೀಡುವುದು – ಹೀಗೆ ಮಧ್ಯಾಹ್ನ ಮೂರುನಾಲ್ಕು ಗಂಟೆಕಾಲ (ಕೆಲವೊಮ್ಮೆ ಕತ್ತಲು ಕವಿಯುವ ವರೆಗೆ) ನಡೆಯುವ ಪಂಜುರ್ಲಿ ದರ್ಶನ ಕೊನೆಗೆ ತಮ್ಮುವಿನ ವಾದ್ಯದೊಡನೆ ಮಂಗಳ ಹಾಡಿದರೆ ಅಂದಿನ ಸಂಕ್ರಮಣ ಕಾರ್ಯಕ್ರಮ ಮುಕ್ತಾಯ.

ತಮ್ಮು ಮಗ ಗುಂಡನನ್ನು ಉತ್ತರಾಧಿಕಾರಿಯಾಗಿ ಪಟ್ಟಕಟ್ಟಿದ. ಗುಂಡ ನಮ್ಮೂರ ಸಮೀಪದ ಪೇಟೆ ಮೇಗರವಳ್ಳಿಯಲ್ಲಿ ಚೌರದ ಷಾಪ್ ತೆಗೆದು ಇತಿಹಾಸ ದಾಖಲಿಸಿದ. ಷಾಪ್‌ನಲ್ಲಿ ಎತ್ತರದ ಕುರ್ಚಿ, ತಲೆ ಹಿಂದೆಮುಂದೆ ಕಾಣುವ ಕನ್ನಡಿ, ಮೈಮೇಲೆ ಕೂದಲುದರದಂತೆ ಹೆಗಲ ಮೇಲೆ, ಕತ್ತಿನ ಸುತ್ತ ಬಿಗಿಯುವ ಬಿಳಿಬಟ್ಟೆ. ಬಗೆಬಗೆ ಹೇರ್‌ಸ್ಟೈಲ್ ಚಿತ್ರಗಳಿರುವ ಫೋಟೊ ಜೊತೆಗೆ ಸಿನಿಮಾ ನಟನಟಿಯರ ವಿವಿಧ ಭಂಗಿಯ ಮೋಹಕ ಭಾವಚಿತ್ರ, ಮರ್ಫಿ ರೇಡಿಯೊ ವಿಶೇಷವಾಗಿ ಗಿರಾಕಿಗಳನ್ನು ಆಕರ್ಷಿಸುತ್ತಿದ್ದವು. ಹುಡುಗರ ಚೌರಕ್ಕೆ ಒಂದಾಣೆ, ಗಂಡಸರಿಗೆ ಎರಡಾಣೆ ದರ ನಿಗದಿ ಪಡಿಸಿದ್ದ. (ಖಂಡುಗ ಭತ್ತದ ಹಳ್ಳಿಯವರ ವಾರ್ಷಿಕ ವರ್ತನೆ ಪದ್ಧತಿ ಹೇಗೆ ಮರೆಯಾಯಿತೋ ದೇವರೇಬಲ್ಲ!) ಷಾಪ್ ಎದುರೇ ಬಸ್‌ಸ್ಟಾಪ್. ಗಿರಾಕಿಗಳ ಅನುಕೂಲಕ್ಕೆಂದು ಮರದ ಬೆಂಚ್ ಬೇರೆ ಹಾಕಿಸಿದ್ದ. ಬಸ್ಸಿಗೆ ಹೋಗಿ ಬರುವವರಿಗೆ ಕ್ಷೌರ ಮಾಡಿಸಿಕೊಳ್ಳಲು ಮಾತ್ರವಲ್ಲ, ಹೊತ್ತುಗೊತ್ತಿಲ್ಲದೇ